ಬಿಸಿಲ ನಾಡಿನ ಸಣ್ಣಕತೆಗಳು

ಒಂದು ದಿವಸದ ರಾಷ್ಟ್ರೀಯ ವಿಚಾರ ಸಂಕಿರಣ

ಶುಕ್ರವಾರ
೨೯ ಸೆಪ್ಟೆಂಬರ್ ೨೦೨೩

ಸಮಯ
೧೦.೦೦ - ೦೫.೦೦

ಕನ್ನಡ ವಿಭಾಗ
ಮಾನವಿಕ ಮತ್ತು ಭಾಷಾ ನಿಕಾಯ

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ
ಕಡಗಂಚಿ, ಕಲಬುರ್ಗಿ

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು ಭಾರತದ ಸಂಸತ್ತಿನ ಅಧಿನಿಯಮ 2009ರ ಅಡಿಯಲ್ಲಿ ಸ್ಥಾಪನೆಯಾಗಿದೆ, ಕಲಬುರಗಿ ಜಿಲ್ಲೆಯ ಆಳಂದ ರಸ್ತೆಯ ಕಡಗಂಚಿಯಲ್ಲಿದೆ. ವಿಶ್ವವಿದ್ಯಾಲಯವು 654 ಎಕೆರೆ ವಿಸ್ತೀರ್ಣವುಳ್ಳ ಸುಸಜ್ಜಿತ ಕ್ಯಾಂಪಸ ಹೊಂದಿದೆ. ವಿಶ್ವವಿದ್ಯಾಲಯವು ಹದಿನಾಲ್ಕು ವರ್ಷಗಳನ್ನು ಪೂರೈಸಿ ತನ್ನ ಶೈಕ್ಷಣಿಕ ಚಟುವಟಿಕೆಗಳಲ್ಲಿ ಹೊಸ ದಾರಿಯನ್ನು ನಿರ್ಮಿಸುತ್ತಿದೆ. ಒಟ್ಟು ೧೨ ನಿಕಾಯಗಳು, ೨೭ ವಿಭಾಗಗಳುಳ್ಳ ವಿಶ್ವವಿದ್ಯಾಲಯದಲ್ಲಿ ದೇಶದ ವಿವಿಧ ರಾಜ್ಯಗಳ ವಿದ್ಯಾರ್ಥಿಗಳು ಅಧ್ಯಯನದಲ್ಲಿ ತೊಡಗಿದ್ದಾರೆ. ರಾಷ್ಟ್ರೀಯ, ಅಂತರರಾಷ್ಟ್ರೀಯ ಖ್ಯಾತಿಯ ಪ್ರಾಧ್ಯಾಪಕರು ಬೋಧನೆ ಮತ್ತು ಸಂಶೋಧನೆಗಳ ಮೂಲಕ ಗಮನ ಸೆಳೆದಿದ್ದಾರೆ.

ಕನ್ನಡ ವಿಭಾಗ

ಕನ್ನಡ ವಿಭಾಗವು ವಿವಿಧ ವಿಷಯಗಳ ತಜ್ಞರನ್ನು ಒಳಗೊಂಡಿದೆ. ವಿಭಾಗವು ಹಲವು ಮಹತ್ವದ ಸಂಶೋಧನಾತ್ಮಕ ಯೋಜನೆಗಳಲ್ಲಿ ತೊಡಗಿಕೊಂಡು, ವಿವಿಧ ವಲಯಗಳಿಗೆ ಸಂಬಂಧಿಸಿದ ಮಹತ್ವದ ಸಂಶೋಧನಾ ಕೃತಿಗಳನ್ನು ಪ್ರಕಟಿಸಿದೆ. ಕನ್ನಡ ಸಾಹಿತ್ಯ, ಭಾಷೆ, ಸಮಾಜ ಮತ್ತು ಸಂಸ್ಕೃತಿಯನ್ನು ಕುರಿತ ವೈವಿಧ್ಯಮಯವಾದ ಮತ್ತು ಅರ್ಥಪೂರ್ಣವಾದ ಪಠ್ಯಕ್ರಮವನ್ನು ರೂಪಿಸಿದೆ. ವಿಭಾಗದ ವಿದ್ಯಾರ್ಥಿಗಳು ತಮ್ಮ ಸೃಜನಶೀಲ ಮತ್ತು ಸಂಶೋಧನಾತ್ಮಕ ಚಟುವಟಿಕೆಗಳ ಮೂಲಕ ನಾಡಿನಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ವಿಭಾಗವು ನಾಡಿನ ಮತ್ತು ದೇಶದ ವಿವಿಧ ವಿದ್ವಾಂಸರನ್ನು ಆಮಂತ್ರಿಸಿ ಹಲವಾರು ವಿಚಾರ ಸಂಕಿರಣ, ಕಾರ್ಯಾಗಾರ, ವಿಶೇಷ ಉಪನ್ಯಾಸಗಳನ್ನು ಏರ್ಪಡಿಸುವ ಮೂಲಕ ಸದಾ ಕ್ರಿಯಾಶೀಲವಾಗಿದೆ.

ಬಿಸಿಲ ನಾಡು

ಕರ್ನಾಟಕದ ಬಿಸಿಲ ನಾಡಿನ ಈಶಾನ್ಯ ಭಾಗವು ಸಾಂಸ್ಕೃತಿಕವಾಗಿ ಬಹು ಶ್ರೀಮಂತವಾಗಿದೆ. ಜಾನಪದ, ಹಳಗನ್ನಡ, ವಚನ, ಕೀರ್ತನೆ, ಸೂಫಿ, ತತ್ವಪದ ಮುಂತಾದವು ಈ ಭಾಗದ ಸಾಮರಸ್ಯದ ಬದುಕಿಗೆ ಸಾಕ್ಷಿಯಾಗಿವೆ. ಸಮಾಜದ ವಿಭಿನ್ನ ವಲಯಗಳಲ್ಲಿ ಈ ಸಾಂಸ್ಕೃತಿಕ ಪರಂಪರೆಯ ಹಿರಿಮೆಯನ್ನು ಕಾಣಬಹುದು. ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳ ಕತೆಗಾರರು ಇಲ್ಲಿಯ ಸಾಂಸ್ಕೃತಿಕ ಬದುಕು ಮತ್ತು ಇದರ ತಲ್ಲಣಗಳನ್ನು ಅಭಿವ್ಯಕ್ತಿಸಿದ್ದಾರೆ. ಬಿಸಿಲ ನಾಡಿನ ಸಮಾಜವನ್ನು ಅರ್ಥೈಸುವಲ್ಲಿ ಈ ಭಾಗದ ಕತೆಗಳು ಮಹತ್ವದ ಕಾಣ್ಕೆಗಳನ್ನು ನೀಡಿವೆ. ಇದಕ್ಕೆ ಕಾರಣ ಈ ಪ್ರದೇಶದ ಭೌಗೋಳಿಕ, ಚಾರಿತ್ರಿಕ, ರಾಜಕೀಯ ಹಿನ್ನೆಲೆಗಳು. ಕರ್ನಾಟಕದ ಇತರೆ ಪ್ರದೇಶಗಳಿಗೆ ದಕ್ಕದ ಅನುಭವ ಲೋಕವೊಂದು ಇಲ್ಲಿ ತನಗೆ ತಾನೇ ರೂಪುಗೊಂಡಿದೆ. ಈ ವಿಭಿನ್ನ ಕಥಾ ರಚನೆಗಳ ಮೂಲಕ ಈ ಪ್ರದೇಶವನ್ನು ಅರಿತುಕೊಳ್ಳುವುದಕ್ಕೆ ವಿಶೇಷ ಅಧ್ಯಯನಗಳ ಅವಶ್ಯಕತೆಯಿದೆ.

ವಿಚಾರ ಸಂಕಿರಣ

ಬಿಸಿಲ ನಾಡಿನ ಸಣ್ಣಕತೆಗಳು ಕರ್ನಾಟಕದ ಸಾಹಿತ್ಯ ಚರಿತ್ರೆಯಲ್ಲಿ ಹೊಸ ಸಂವೇದನೆಗೆ ಕಾರಣವಾಗಿವೆ. ಈ ಕತೆಗಳನ್ನು ತಾತ್ವಿಕ ಹಾಗೂ ರಾಚನಿಕ ವಿನ್ಯಾಸಗಳಲ್ಲಿ ಅಧ್ಯಯನ ಮಾಡುವುದು ಈ ರಾಷ್ಟ್ರೀಯ ವಿಚಾರ ಸಂಕಿರಣದ ಆಶಯವಾಗಿದೆ. ಬಿಸಿಲ ನಾಡಿನ ಹಳ್ಳಿಗಳು, ಸಮಾಜದ ವಿವಿಧ ಸ್ತರಗಳ ಸಮುದಾಯಗಳು, ಆರ್ಥಿಕ ಏರಿಳಿತಗಳು, ಸಾಂಸ್ಕೃತಿಕ ಚಹರೆಗಳು ಹಲವಂದದಲ್ಲಿ ಕತೆಗಳೊಳಗೆ ಅಂತಸ್ಥಗೊಂಡಿವೆ. ಈ ಕತೆಗಳ ಸಾಧ್ಯತೆಗಳನ್ನು ಶೋಧಿಸುವುದು ಹಾಗೂ ಹೊಸ ಚರ್ಚೆಗಳನ್ನು ಹುಟ್ಟುಹಾಕುವುದು ಈ ವಿಚಾರ ಸಂಕಿರಣದ ಉದ್ದೇಶ.

ವಿಷಯಗಳು

ಬಿಸಿಲ ನಾಡಿನ ಕತೆಗಳ ಪರಂಪರೆ
ಬಿಸಿಲ ನಾಡಿನ ಕತೆಗಳ ವಸ್ತು ವೈವಿಧ್ಯ
ಬಿಸಿಲ ನಾಡಿನ ಕತೆಗಳ ಶೈಲಿ, ತಂತ್ರ
ಬಿಸಿಲ ನಾಡಿನ ಕತೆಗಳ ಭಾಷೆ ಮತ್ತು ಒಳನುಡಿಗಳು
ಬಿಸಿಲ ನಾಡಿನ ಕತೆಗಳಲ್ಲಿ ಸಾಮಾಜಿಕ ಪ್ರಜ್ಞೆ
ಬಿಸಿಲ ನಾಡಿನ ಕತೆಗಳಲ್ಲಿ ರಾಜಕೀಯ ಪ್ರಜ್ಞೆ
ಬಿಸಿಲ ನಾಡಿನ ಕತೆಗಳಲ್ಲಿ ಪ್ರತಿರೋಧದ ನೆಲೆ
ಬಿಸಿಲ ನಾಡಿನ ಕತೆಗಳಲ್ಲಿ ಪ್ರಾದೇಶಿಕತೆಯ ಸ್ವರೂಪ
ಬಿಸಿಲ ನಾಡಿನ ಕತೆಗಳಲ್ಲಿ ಚಾರಿತ್ರಿಕ ಪ್ರಜ್ಞೆ
ಬಿಸಿಲ ನಾಡಿನ ಕತೆಗಳು ಮತ್ತು ಕರ್ನಾಟಕದ ಕಥಾ ಸಾಹಿತ್ಯ
ಬಿಸಿಲ ನಾಡಿನ ಕತೆಗಳಲ್ಲಿ ಕರ್ನಾಟಕತ್ವದ ಸ್ವರೂಪ
ಬಿಸಿಲ ನಾಡಿನ ಕತೆಗಳು ಮತ್ತು ಮಹಿಳಾ ಜಗತ್ತು
ಬಿಸಿಲ ನಾಡಿನ ಕತೆಗಳಲ್ಲಿ ದಲಿತ ಪ್ರಜ್ಞೆ
ಬಿಸಿಲ ನಾಡಿನ ಕತೆಗಳಲ್ಲಿ ಸೌಹಾರ್ದದ ನೆಲೆಗಳು

ಪ್ರಕಟಣೆ

ಈ ವಿಚಾರ ಸಂಕಿರಣದಲ್ಲಿ ಮಂಡನೆಯಾದ ಪ್ರಬಂಧಗಳನ್ನು ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇರೆಗೆ ಗ್ರಂಥ ರೂಪದಲ್ಲಿ ಪ್ರಕಟಿಸಲಾಗುವುದು.

ಪ್ರಮುಖ ದಿನಾಂಕಗಳು

ಸಾರಲೇಖ ಸಲ್ಲಿಕೆ - ಆಗಸ್ಟ್ ೩೧, ೨೦೨೩
ಸಾರಲೇಖ ಆಯ್ಕೆ - ಸೆಪ್ಟೆಂಬರ್ ೦೨, ೨೦೨೩
ಪೂರ್ಣಪ್ರಬಂಧ ಸಲ್ಲಿಕೆ. - ಸೆಪ್ಟೆಂಬರ್ ೨೦, ೨೦೨೩
ನೋಂದಣಿ - ಸೆಪ್ಟೆಂಬರ್ ೨೫, ೨೦೨೩

ನೊಂದಣಿ ಶುಲ್ಕ

ಉಪನ್ಯಾಸಕರು - ೫೦೦
ಸಂಶೋಧನಾ ವಿದ್ಯಾರ್ಥಿಗಳು - ೩೦೦

೫೦೦ ಶಬ್ದಗಳಿಗೆ ಮೀರದ ಸಂಶೋಧನಾ ಪ್ರಬಂಧದ ಸಾರಲೇಖವನ್ನು ಯುನಿಕೋಡ್‌ನಲ್ಲಿ ಟೈಪ್ ಮಾಡಿ ಕೆಳಗೆ ಕೊಟ್ಟಿರುವ ಗೂಗಲ್ ಫಾರ್ಮ್ ಮೂಲಕ ಕಳಿಸಬಹುದು.

https://docs.google.com/forms/d/1YbajE_XVnqGs39nMTe1gIZLa0fKh0B5YoebESQ8sSLM/edit

ಪ್ರಧಾನ ಪೋಷಕರು

ಪ್ರೊ. ಬಟ್ಟು ಸತ್ಯನಾರಾಯಣ,
ಕುಲಪತಿಗಳು,
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ

ಮಹಾ ಪೋಷಕರು

ಪ್ರೊ. ಆರ್. ಆರ್. ಬಿರಾದರ್,
ಕುಲಸಚಿವರು, ಕರ್ನಾಟಕ ಕೇಂದ್ರೀಯ
ವಿಶ್ವವಿದ್ಯಾಲಯ

ಪೋಷಕರು

ಪ್ರೊ. ವಿಕ್ರಮ ವಿಸಾಜಿ, ಡೀನರು,
ಮಾನವಿಕ ಮತ್ತು ಭಾಷಾ ನಿಕಾಯ

ಆಯೋಜಕರು

ಪ್ರೊ. ಬಸವರಾಜ ಕೋಡಗುಂಟಿ,
ಮುಖ್ಯಸ್ಥರು, ಕನ್ನಡ ವಿಭಾಗ

ಆಯೋಜಕ ಮಂಡಳಿ

ಪ್ರೊ. ಶಿವಗಂಗಾ ರುಮ್ಮಾ
೯೨೪೨೮೬೩೯೦೮

ಡಾ. ಅಪ್ಪಗೆರೆ ಸೋಮಶೇಖರ್
೯೯೦೨೯೩೩೭೭೨

ಡಾ. ಟಿ.ಡಿ. ರಾಜಣ್ಣ ತಗ್ಗಿ
೮೯೦೪೪೪೬೩೪೪

ಡಾ. ವಿಜಯಕುಮಾರ ವಿಶ್ವಮಾನವ
೯೯೭೨೪೬೫೨೨೩